ಮುಖ್ಯಮಂತ್ರಿಯವರ ಹೇಳಿಕೆ
ಬೆಳಗಾವಿ ಗಡಿ ಸಮಸ್ಯೆ ಬಗ್ಗೆ

೬-೦೦ ಪಿ. ಎಂ.

ಶ್ರೀ ರಾಮಕೃಷ್ಣಹೆಗಡೆ —ಮಾನ್ಯ ಅಧ್ಯಕ್ಷರೇ, ಒಂದು ಮಹತ್ವದ ವಿಚಾರದಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದಿದ್ದೇವೆ. ಆ ವಿಚಾರದಲ್ಲಿ ಈ ಮನೆಯವರು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ಆ ಪತ್ರವನ್ನು ಈ ಸಭೆಯ ಮುಂದೆ ಓದಿ ಹೇಳಲಿಕ್ಕೆ ತಮ್ಮ ಪರವಾನಗಿಯನ್ನು ಕೇಳುತ್ತೇನೆ.

"My dear Prime Minister,

I was shocked to see a news item in the papers to-day on the Belgaum issue, a copy of which is enclosed for your perusal. The report says when an all Party delegation from Maharashtra met you yesterday on the border dispute you hinted at the reference of this issue to a judge.

If the above is true, I am afraid you have not been briefed correctly and completely in the matter.

From the beginning of the Century till 1956 when States reorganisation took place on the basis of the recommendations of the States Reorganisation Commission, several Commissions and Committees were appointed at the request of Maharashtra to look into the question whether Belgaum should be a part of Karnataka or go to Maharashtra and all these Commissions and Committees including Dhar Commission, JVP Commissions (Jawaharlala Nehru, Vallabha Bhai Patel, Pattabhi Seetharamaih Commission), invariably gave an award in favour of Karnataka. Inspite of the opposition of Karnataka Government, again at the insistence of Maharashtra, Mahajan Commission was appointed to look into the border dispute between Karnataka and Maharashtra, and Karnataka and Kerala This Commission also has categorically held that Belgaum should remain in Karnataka. At the time of the appointment of the Mahajan Commission which was done on the basis of a recommendation made to the Union Government by the Congress Working Committee, it was specificilly agreed that the award of the Commission will be binding on all Parties including the Union Government. The then Chief Minister of Maharashtra Shri V P. Naik had stated "the verdict of the Commission would be binding not only on both the States but on the Union Government as well."

The Karnataka legislature, on the 20th December 1967, unanimously passed the following resolution.

"This House, having considered the Report of the Mahajan Commission on Maharashtra-Mysore-Kerala boundary disputes urges upon the Central Government to immeniately implement the recommendations of the Commission inspite of the fact that the Commission had failed to recognise the just claims of the State of Mysore and that some of its recommendations are quite injurious to the legitimate interest of the State of Mysore and also vehemently oppose any proposal or suggestion for obtaining national consensus or taking opinion poll."

The Maharashtra leaders have a habit of periodically going to Delhi and meeting Prime Minister and other leaders in the Centre. It is unfortunate that the Central leaders instead of telling the Maharashtrians that the issue has been decided once and forall and therefore repeated representations will not be entertained, are giving an impression that the issue is still open. Karnataka did not ask for the appointment of the Mahajan Commission. It was Maharashtra that insisted on its appointments and Maharashtra had given an undertaking that whatever might be the award it would be final and binding on all Parties. During the last many years barring certain activities in Bombay and Delhi, in the border areas people in general are quiet, and happy. I therefore implore you that for heaven's sake do not give any impression that the matter has not been finally decided. The only thing the Union Government is duty bound to do is to implement the Mahajan Award in toto.

With regards,

Yours sincerely,"

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಗಡಿ ವಿಚಾರದಲ್ಲಿ ನಾವು ಪದೇ ಪದೇ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ನಾವು ಸಭಾ ಅನುಮತಿಯಿಂದ ಎಲ್ಲಾ ರಾಜಕೀಯ ಪಕ್ಷದವರು ಸೇರಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಮಹಾಜನ್ ವರದಿಯ ಶಿಫಾರಸ್ಸುಗಳನ್ನು, ಜಜ್‌ಮೆಂಟ್‌ನ್ನು, ಅವಾರ್ಡ್‌ನ್ನು ಅದು ಯಾವುದೇ ಇರಲಿ ಅದನ್ನು ಅಂತಿಮವಾಗಿ ಜಾರಿಗೆ ತಂದರೆನಮ್ಮ ಕರ್ನಾಟಕದಲ್ಲಿರುವ ಗಡಿ ಪ್ರದೇಶಗಳು ಅವರ ಕಡೆಗೂ ಕೆಲವು ಭಾಗ ಹೋಬಹುದು ಅವರ ಗಡಿ ಪ್ರದೇಶದಲ್ಲಿರುವ ಕೆಲವು ಭಾಗಗಳು ನಮಗೆ ಬರಬಹುದು. ಇದರ ಬಗ್ಗೆ ೧೯೬೯ ರಲ್ಲಿ ಈ ಸದನದಲ್ಲಿ ರೆಸೊಲ್ಯೂಷನ್‌ನ್ನು ಮಾಡಿದ್ದೇವೆ. We stand by that resolution and we have to stand by that resolution. There cannot be any change in our line of thinking. ಅದು ಯಾವಾಗಲೂ ಇರಬಾರದು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಶ್ರೀಮಾನ್ ನೀಲಂಗೇಕರ್‌ರವರು ಇನ್ನು ೨-೩ ದಿವಸಗಳಲ್ಲಿ ಪ್ರಧಾನ ಮಂತ್ರಿಯವರನ್ನು ನೋಡುವವರಿದ್ದಾರೆ ಎನ್ನುತಕ್ಕ ವಿಚಾರವನ್ನು ಪೂನಾದಲ್ಲಿ ಹೇಳಿದ್ದಾರೆ. ಇವರ ಜೊತೆಯಲ್ಲಿ ಮಹಾರಾಷ್ಟ್ರ ವಿಕೀಕರಣ ಸಮಿತಿಯವರು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡತಕ್ಕ ವಿಚಾರವಿದೆ. ಇಂತಹ ಸಮಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿರುವುದು ಸಕಾಲಿಕ

ವಾತ್ತು ಸಮಯೋಚಿತವಾಗಿದೆ. ಈ ಸಂದರ್ಭದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಮತ್ತು ಪ್ರಧಾನ ಮಂತ್ರಿಯವರ ಮುಖಾಂತರ ಹೇಳತಕ್ಕಂಥಾದ್ದು ಬಹಳ ಅರ್ಥ ಇದೆ. ಕಳೆದ ಕೆಲವು ದಿವಸಗಳ ಹಿಂದೆ ಮಾನ್ಯ ಸದಸ್ಯರಾದ ಎಂ. ಎಸ್. ಪಾಟೀಲರು ಸಹ ಸದನದ ಗಮನವನ್ನು ಈ ವಿಚಾರದ ಬಗ್ಗೆ ಸೆಳೆದಿದ್ದಾರೆ. ಕೇಂದ್ರ ಸರ್ಕಾರಕ್ಕೆ ಮತ್ತು ಪ್ರಧಾನ ಮಂತ್ರಿಯವರಿಗೆ ಪುನಃ ಈ ನಿರ್ಣಯದ ಆಧಾರದ ಮೇಲೆ ಅವರಿಗೆ ಮನವರಿಕೆ ಮಾಡತಕ್ಕಂಥಹ ಸಂದರ್ಭ ಬಂದಿದೆ. ಅದನ್ನು ನಾನು ವಿಚಾರ ಮಾಡೋಣ ತಮ್ಮ ಅಭಿಪ್ರಾಯ ಕೂಡ ಇದೇ ಆಗಿದೆ ಹಾಗೂ ನಮ್ಮ ಅಭಿಪ್ರಾಯ ಕೂಡ ಅದೇ ಆಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಪ್ರಧಾನ ಮಂತ್ರಿಯವರು ಮಹಾರಾಷ್ಟ್ರದ ಒಂದು ಪಕ್ಷದ ನಿಯೋಗ ಹೋದ ಕೂಡಲೇ ಅದರ ನಾಯಕತ್ವವನ್ನು ಆಲ್ಲಿಯ ಮುಖ್ಯಮಂತ್ರಿಯವರು ವಹಿಸಿದ್ದಾರೆಂದು ಅದನ್ನು ನೋಡಿದಾಕ್ಷಣ ಪ್ರಧಾನಿಯವರು ಯಾವುದೇ ಒಂದು ಒತ್ತಡಕ್ಕೆ ಮಣಿಯುವುದಿಲ್ಲ ಎಂಬ ಒಂದು ಅಪಾರವಾದ ನಂಬಿಕೆ ನಮಗೂ, ನಿಮಗೂ ಇದೆ ಎಂದು ನಾನು ಹೇಳ ಬಯಸುತ್ತೇನೆ. ಇಂತಹ ಯಾವುದೇ ವಿಚಾರಗಳು ಬಂದಾಗ ಅದರ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತಾಳುವಲ್ಲಿ ನಾವೆಲ್ಲರೂ ಕಾರ್ಯೋನ್ಮುಖರಾಗಿದ್ದೇವೆ. ಮಾನ್ಯ ಬೊಮ್ಮಾಯಿಯವರಿಗೂ ಗೊತ್ತಿದೆ. ೧೯೬೯ನೇ ಇಸವಿಯಲ್ಲಿ ಡೆಲ್ಲಿಗೆ ಮೂರು ನಾಲ್ಕು ಇಂತಹ ನಿಯೋಗಗಳು ಹೋಗಿದ್ದುವು. ಅವರು ಹೋಗಿರುವುದರಿಂದ ಅದರ ಹಿಂದೆ ಒಂದು ಭಾವನೆ ಬೇರೆಯಾಗಿ ಬಂತು. ಈ ಪ್ರಶ್ನೆಯ ಸಲುವಾಗಿ ಕರ್ನಾಟಕದಿಂದ ಯಾವ ನಿಯೋಗವೂ ಬಂದಿಲ್ಲ ಎನ್ನುವ ಭಾವನೆ ನಮ್ಮ ಪ್ರಧಾನ ಮಂತ್ರಿಗಳವರಿಗೆ ಬರಲಾರದು. ಮತ್ತು ಬರುವ ಹಾಗೆಯೂ ಇಲ್ಲ. ಆದುದರಿಂದ ಅವರ ಮನಸ್ಸಿನಲ್ಲಿ ನಿಯೋಗ ಹೋಗಿಲ್ಲದ ಕಾರಣಕ್ಕಾಗಿ ನಮ್ಮ ವಿರೋಧವಾಗಿ ಯಾವ ಭಾವನೆಯೂ ಉದ್ಭವಿಸುವುದಿಲ್ಲ ಎಂದು ನಾನು ಹೇಳಲಿಚ್ಛಿಸುತ್ತೇನೆ. ತಾವು ಮುಖ್ಯಮಂತ್ರಿಗಳು, ತಮ್ಮನ್ನು ಈವಿಷಯದ ಕುರಿತು ಮಾತನಾಡಲು ಕರೆದು ತಮ್ಮೊಡನೆ ಪ್ರಧಾನ ಮಂತ್ರಿಯವರು ವಿಚಾರ ಮಾಡಿಯೇ ಮಾಡುತ್ತಾರೆ. ಇದು ತುಂಬಾ ಜಟಿಲವಾಗಿರತಕ್ಕಂತಹ ವಿಚಾರವೂ ಹೌದು. ಇದು ಕೆಲವು ವರ್ಷಗಳಿಂದ ಜ್ವಲಂತ ಸಮಸ್ಯೆಯಾಗಿಯೇ ಉಳಿದಿದೆ ಈಗಾಗಲೇ, ಅಸ್ಸಾಂ ಸಮಸ್ಯೆ ಮತ್ತು ಪಂಜಾಬ್ ಸಮಸ್ಯೆಗಳಿಗೆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಈ ನಿರ್ಣಯವನ್ನು ದೇಶದ ಎಲ್ಲಾ ರಾಜಕೀಯ ಪಕ್ಷಗಳವರೂ ಕೂಡಾ ಸ್ವಾಗತ ಮಾಡಿದ್ದಾರೆ. ಈಗ ಉಳಿದಿರುವ ಸಮಸ್ಯೆಗಳು, ಅದಂ ಕರ್ನಾಟಕ ಮಹಾರಾಷ್ಟ್ರ ಗಡಿ ಸಮಸ್ಯೆ ಇರಬಹುದು, ಅಥವಾ ಬೇರೆ ಯಾವುದೇ ಸಮಸ್ಯೆ ಇರಬಹುದು. ಪ್ರಧಾನಿಯವರು ಈ ಉಳಿದಿರುವಂತಹ ಸಮಸ್ಯೆಗಳಿಗೆ ಶೀಘ್ರ ಪರಿಹಾರವನ್ನು ಕಂಡುಹಿಡಿಯುತ್ತಾರೆ ಎಂಬ ವಿಷಯ ನಿರ್ವಿವಾದವಾದುದು. ಇದರಿಂದ ಅಂತಿಮವಾಗಿ ಈ ಪ್ರಶ್ನೆ ಬಗೆಹರಿಯುತ್ತದೆ ಎಂಬ ನಂಬಿಕೆ ನನಗೆ ಇದೆ. ಮಹಾರಾಷ್ಟ್ರದವರೂ ಕೂಡಾ ನಮ್ಮ ಸಹೋದರರು. ನಾವು ಆ ದೃಷ್ಟಿಯಿಂದ ಅವರನ್ನು ನೋಡುತ್ತೇವೆ. ಹಾಗೆಯೇ ನಮ್ಮನ್ನೂ ಕೂಡಾ ಆ ದೃಷ್ಟಿಯಿಂದ ಕಾಣತಕ್ಕಂತಹ ಜನರೂ ಆ ರಾಜ್ಯದಲ್ಲಿಯೂ ಕೂಡಾ ಇದ್ದಾರೆ. ನಾವು ಗಡಿ ವಿಷಯದಲ್ಲಿ ಜಗಳಾಟ, ಹೊಡೆದಾಟ ಮಾಡಬೇಕೆಂದು ಇಲ್ಲ ಆ ದೃಷ್ಟಿಯಿಂದ ನಾವೆಲ್ಲರೂ ಸಹೋದರರು ಎನ್ನುವ ಭಾವನೆಯನ್ನು ಎಲ್ಲರೂ ಮುಂದುವರಿಸಿಕೊಂಡು ಹೋಗಬೇಕೆನ್ನುವ ಎಲ್ಲರೂ ವಿಚಾರವನ್ನು ಒಪ್ಪತಕ್ಕಂಥದ್ದು ಆಗಿದೆ. ಪ್ರಧಾನಿಯವರೂ ಕೂಡಾ ಈ ವಿಷಯದಲ್ಲಿ ಸೂಕ್ತವಾದ ನಿರ್ಣಯವನ್ನು ಕೊಡುತ್ತಾರೆಂದು ನಮಗೂ ನಂಬಿಕೆ ಇದೆ. ನಾಳೆ ತಾವು ಡೆಲ್ಲಿಗೆ ಹೋಗುತ್ತಿದ್ದೀರಿ ಅಲ್ಲಿಗೆ ಹೋದಾಗ ಪ್ರಧಾನಿಯವರನ್ನು ಕಂಡು ಅವರೊಡನೆ ಈ ವಿಷಯದಲ್ಲಿ ಮಾತನಾಡ ಬೇಕು. ತಾವು ಪ್ರಧಾನಿಯವರಿಗೆ ಬರೆದ ಪತ್ರದ ಸಾರಾಂಶವನ್ನು ನಾನು ತಿಳಿದುಕೊಂಡಿದೆಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಪತ್ರವನ್ನು ಓದುವಾಗ ನಾನು ಇರಲಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ವಿಷಯವನ್ನು ತಿಳಿಸಿದರು. ಇದು ಒಳ್ಳೆಯ ವಿಚಾರ ತಾವುಗಳು ಪ್ರಧಾನಿಯವರನ್ನು ಕಂಡು ಮಾತನಾಡುವುದು ಬಹಳ ಒಳ್ಳೆಯದು. ತಾವು ಮುಖ್ಯಮಂತ್ರಿಗಳಾಗಿರುವುದರಿಂದ ಆ ಕೆಲಸವನ್ನು ಮಾಡಿ. ಅಂತೆಯೇ ನಾನೂ ಕೂಡಾ ಡೆಲ್ಲಿಗೆ ಹೋದಾಗ ಪ್ರಧಾನಿಯವರನ್ನು ಭೇಟಿ ಮಾಡುತ್ತೇನೆ. ನಮ್ಮ ರಾಜ್ಯದ ವಿಚಾರದಲ್ಲಿ ಈ ಸದನದ ನಿರ್ಣಯದ ಆಧಾರದ ಮೇಲೆ ನಾವು ನಮ್ಮ ರಾಜ್ಯದ ವಿಚಾರವನ್ನು ವ್ಯಕ್ತಪಡಿಸುತ್ತೇವೆ. ತಾವೂ ಕೂಡಾ ಅವರನ್ನು ಕಂಡು ಭೇಟಿ ಮಾಡಿ ಬರಬೇಕು. ಯಾವುದೇ ಒತ್ತಡಕ್ಕೆ ಮಣಿಯತಕ್ಕಂತಹ ವಿಚಾರ ಅಲ್ಲಿ ಇಲ್ಲ ಎಂದು ನನ್ನ ನಂಬಿಕೆ.

ಶ್ರೀ ಎ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳವರು ಬರೆದಿರುವ ಪತ್ರದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಏಕೆಂದರೆ ಈ ವಿಷಯದ ಬಗ್ಗೆ, ಈ ಮನೆ ತೀರ್ಮಾನವನ್ನು

ಈಗಾಗಲೇ ಮಾಡಿದೆ. ಅದಕ್ಕೆ ಅನುಗುಣವಾಗಿ ಈ ಪತ್ರವನ್ನು ಬರೆದಿದ್ದಾರೆ. ಈ ಪತ್ರದ ನಕಲನ್ನು ನಮಗೂ ಕೊಟ್ಟರೆ ಸಂತೋಷ. ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ ನಮ್ಮ ಎಂ.ಇ.ಎಸ್.ನ ಶಾಸಕರು ಮಂತ್ರಿತರರು ಕೇಂದ್ರದಮೇಲೆ ಒತ್ತಡವನ್ನು ಜಾಸ್ತಿ ತರುತ್ತಿದ್ದಾರೆ ಎಂದು ಕಾಣುತ್ತದೆ ಪ್ರಧಾನಿಯವರ ಮೇಲೆ ಈ ವಿಷಯದಲ್ಲಿ ಅವರು ಒತ್ತಡವನ್ನು ತರುತ್ತಾ ಇದ್ದಾರೆ. ಅವರು ಯಾವಾಗಲೂ ಈ ರೀತಿಯ ಒತ್ತಡಗಳನ್ನು ಪ್ರತೀ ವರ್ಷವೂ ತರುತ್ತಾ ಇದ್ದಾರೆ. ಆದರೆ ಈ ಸಾರಿ ಹೆಚ್ಚಿಗೆ ಒತ್ತಡ ಇದೆ. ಈಗಾಗಲೇ ಪೂನ ಮುಂಬೈಗಳಲ್ಲಿ ನಿಯೋಗಗಳನ್ನು ಕೊಂಡೊಯ್ಯುವುದು ಮಂತ್ರಿತರವುಗಳನ್ನು ಮಾಡಿ ಕೊನೆಗೆ ಡೆಲ್ಲಿಗೆ ಹೋಗಿದ್ದಾರೆ. ಅಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಕೇಂದ್ರದಲ್ಲಿರುವ ಕೆಲವು ಮಂತ್ರಿಗಳು ಸಹ ಇದರ ಬಗ್ಗೆ ಸೇರಿ ವಿಚಾರ ಮಾಡಿದ್ದಾರೆ ಎಂದು ನಮ್ಮ ಸ್ನೇಹಿತರು ಹೇಳಿದ್ದಾರೆ. ಮಾನ್ಯ ಬಂಗಾರಪ್ಪನವರೂ ಕೂಡಾ ಹೇಳಿದರು. ಕೇಂದ್ರ ಯಾವ ಒತ್ತಡಕ್ಕೆ ಮಣಿಯಕೂಡದು, ಮಹಾಜನ ಆಯೋಗವನ್ನು ಒಪ್ಪಿಕೊಂಡ ಮೇಲೆ ಹಾಗೆ ಮಾಡದಿದ್ದರೆ ತೊಂದರೆಗೆ ಈಡಾಗುತ್ತದೆ ಎಂದು ಈ ವಿಷಯದ ಬಗ್ಗೆ ನಮ್ಮ ಕಡೆಯಿಂದಲೂ ಸಹ ಲಾಭ ಮಾಡಬೇಕೆಂದು ನನ್ನ ಅಭಿಪ್ರಾಯ. ಅದರಲ್ಲಿ ಪಾರ್ಲಿಮೆಂಟ್ ಸದಸ್ಯರೂ ಕೂಡಾ ಇದರ ಬಗ್ಗೆ ಪ್ರಧಾನಿಯವರೊಂದಿಗೆ ಮಾತನಾಡಬಹುದು. ಮಾನ್ಯ ಬಂಗಾರಪ್ಪನವರು ಹೋಗುತ್ತಾರೆ ಎಂದು ಹೇಳಿದರು. ಈ ವಿಷಯದಲ್ಲಿ ಅವರೂ ಕೂಡಾ ಪ್ರಧಾನಿಯವರನ್ನು ಭೇಟಿ ಮಾಡಬೇಕು. ಆದೂ ಅಲ್ಲದೇ ಈ ಸದನದ ಎಲ್ಲಾ ಪಕ್ಷಗಳ ಒಂದು ನಿಯೋಗವನ್ನು ಮಾಡಿಕೊಂಡು ಡೆಲ್ಲಿಗೆ ಹೋಗಿ ಪ್ರಧಾನಿಯವರನ್ನು ಕಂಡು ಮಾತನಾಡಿ ಇದರ ಬಗ್ಗೆ ಒಂದು ಇತ್ಯರ್ಥ ಮಾಡಿ ಎಂದೂ, ಮಹಾಜನ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಇತ್ಯರ್ಥ ಮಾಡಿ ಎಂದೂ, ಹೇಳುವುದು ಅತೀ ಮುಖ್ಯ ಎಂದು ನನ್ನ ಅಭಿಪ್ರಾಯ. ಅಂತೆಯೇ ಮಾನ್ಯ ಮುಖ್ಯ ಮಂತ್ರಿಗಳು ಬರೆದುದನ್ನು ಸಕಾಲಿಕ ಮತ್ತು ಯೋಗ್ಯವಾದುದು ಎಂದು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ —ಮಾನ್ಯ ಅಧ್ಯಕ್ಷರೇ, ಈ ಗಡಿ ಸಮಸ್ಯೆಯ ವಿಷಯದಲ್ಲಿ ನಮ್ಮ ಮುಖ್ಯ ಮಂತ್ರಿಗಳ ನಿಲುವನ್ನು ನಮ್ಮ ಪಕ್ಷದ ಪರವಾಗಿ ಸ್ವಾಗತಮಾಡುತ್ತೇನೆ. ಸುಮಾರು ೨೦ ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ವಿವಾದವನ್ನು ಆದಷ್ಟು ಬೇಗ ತೀರ್ಮಾನ ಮಾಡಿದರೆ ಬಹಳ ಒಳ್ಳೆಯದು. ಅನಾವಶ್ಯಕವಾಗಿ ನಮ್ಮನ್ನೆ ಗಡಿ ಸಮಸ್ಯೆ ಇದೆಯೆಂದು ಪತ್ರಿಕೆಯಲ್ಲಿ ಹಾಕುವುದು ಗೊಂದಲ ಉಂಟುಮಾಡುವುದು ತ್ತಾ ಇನ್ನೆ ಇದಕ್ಕೆ ಒಂದು ತೀರ್ಮಾನ ಆಗದಿದ್ದರೆ ನೆರೆಹೊರೆಯ ರಾಜ್ಯಗಳ ಜನರು ಅಣ್ಣತಮ್ಮಂದಿರಂತೆ ಬದುಕುವಲ್ಲಿ ಈ ವಿವಾದದಿಂದಾಗಿ ಆಆಶ್ವಾಸ ಉಂಟಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರ ನಿಲುವನ್ನು ಸ್ವಾಗತ ಮಾಡಿ ನನ್ನ ಅನಿಸಿಕೆಗಳನ್ನು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ —ಅಧ್ಯಕ್ಷರೇ, ಈ ರಾಜ್ಯದ ಹಿತದೃಷ್ಟಿಯಿಂದು ನಮ್ಮ ಪ್ರಧಾನ ಮಂತ್ರಿಗಳಿಗೆ ನಮ್ಮ ಮುಖ್ಯಮಂತ್ರಿಯವರು ಪತ್ರವನ್ನು ಬರೆದಿದ್ದಾರೆ. ಮಾನ್ಯ ಕೃಷ್ಣನ್‌ರವರು ಹೇಳಿದ ಹಾಗೆ ಈ ಸದನದ ಒಂದು ಸಮಿತಿಯನ್ನು ಮಾಡಿ ಅಲ್ಲಿಗೆ ಹೋಗಿ ನಮ್ಮ ರಾಜ್ಯದ ಹಿತದೃಷ್ಟಿಯಿಂದ ನಮ್ಮ ವಿಷಯಗಳನ್ನು ಪ್ರಧಾನಿಯವರ ಮುಂದೆ ಮಂಡಿಸಬೇಕು. ಮಹಾಜನ ಆಯೋಗದ ವರದಿಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೂ ಎಂಬ ಸಮ್ಮ ರಾಜ್ಯದ ಜನರ ಅಭಿಪ್ರಾಯವನ್ನು ಅವರಲ್ಲಿ ಮೂಡಿಸಬೇಕು. ಮಾನ್ಯ ಮುಖ್ಯಮಂತ್ರಿಯವರು ಪತ್ರವನ್ನು ಬರೆದಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೇ ನನಗೂ ಮಾತನಾಡಲು ಅವಕಾಶ ಕೊಡಿರಿ. ನಾವು ಗಡಿ ವಿಷಯದಲ್ಲಿ ಹೋರಾಟ ಮಾಡಿದವರು.

ಅಧ್ಯಕ್ಷರು.—ಇಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ —ಮಾನ್ಯ ಮಂತ್ರಿಯವರು ಕೇವಲ ಒಂದು ಸಾವಿರ ಮನೆಗಳನ್ನು ಮಾತ್ರ ಇಡೀ ರಾಜ್ಯಕ್ಕೆ ಮಂಜೂರು ಮಾಡಿದ್ದಾರೆ. ಆದರಲ್ಲಿ ಶಿವಮೊಗ್ಗಕ್ಕೆ ಕೇವಲ ೧೩-೧೪ ಜನತಾ ಮನೆಗಳನ್ನು ಮಂಜೂರು ಮಾಡಿದ್ದಾರೆ. ಅಂದರೆ ಪುರಸಭೆಯೊಂದಕ್ಕೆ ೩-೪ ಮನೆಗಳೂ ಕೂಡಾ ಆಗುವುದಿಲ್ಲ. ಇದರಿಂದ ಎಷ್ಟರಮಟ್ಟಿಗೆ ಬಡವರ ಕಲ್ಯಾಣ ಆಗುತ್ತದೆ ? ಇದು ಇರುವುದು ಆರ್ಥಿಕವಾಗಿ ಹಿಂದುಳಿದಿರುವವರಿಗೆ. ಇಷ್ಟೊಂದು ಕಡಿಮೆ ಸಂಖ್ಯೆಯನ್ನು ಕೊಟ್ಟಿದ್ದೀರಿ ಅದರ ಬಗ್ಗೆ ತಾವು ದಯವಾಡಿ ಯೋಚನೆ ಮಾಡಬೇಕು. ಹಿಂದೆ ಈ ಬಡವರ ಮನೆಗಳನ್ನು ರಿಪೇರಿ ಮಾಡತಕ್ಕಂತಹ